**In the Court of II Addl. District & Sessions and Special Judge, VIJAYPUR, At: VIJAYPUR.**

*****

Special Case SC. ST No. 70/2020
PW No.16
CW No.36

| | | |
|---|---|---|
| Name | : | Dr. Shivanand Gundalli |
| Father's Name | : | Mallikarjun |
| Age | : | 40 years |
| Occupation | : | Doctor, Senior Specialist District Hospital Vijayapura. |
| Residence | : | Vijayapura. |

- - - - - -

**Duly Sworn on: 29/06/2024**
**Examination-in-Chief : By Self:**

1) From 2019 to till this day I am working as Doctor in District hospital Vijayapura.

2) On 30.12.2019 patient by name Narayan Chaluvadi accompanied by PC-634 of Babaleshwar Police station admitted to district hospital with history of burns.

3) I examined the patient on 30.12.2019 at about 09.20 PM.

4) I noticed the following injured on the patient.

* Burning of right and left leg up to knee joint with blebs and fluid oozing from wound.

* Burn on left dorsal area of hand.

* Burn on right dorsal area hand up to elbow joint. Erythema present over most part of burnt area.

5) All the above wounds constitute up to 25% total burn in body. Wounds is fresh and it is within 24 hours. Wounds are grievous in nature.

5) Doctor identified wound certificate issued by him, Hence it is marked as at Ex.P. 44 and his signature at Ex.P. 44(a).

**Cross-Examination by: Sri. RSL, Adv., for accused no.1 to 6:**

1) It is true I have not mentioned the history of burn injuries in the Ex.P.44 witness voluntaries that normally history will not be written. In the case papers history is mentioned. It is true to suggest that, the injuries mentioned in Ex.P. 44 might have been caused at the time of extinguishing the fire. It is false to suggest that, I have issued false certificate at the request of police. It is false suggest the I am deposing falsely.

**Re-Examination: Nil**.

(Typed to my dictation in the open Court)

R.O.I. & A.C.

II Addl. District & Sessions Judge,
VIJAYPUR.
13.06.2024.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**

ಪಿ.ಡಬ್ಲೂ.17

ಸಿ.ಡಬ್ಲೂ.35

ಸಾಕ್ಷಿದಾರರ ಹೆಸರು : ಎನ್.ಎಸ್.ವಿಜಯಕುಮಾರ

ತಂದೆಯ ಹೆಸರು : ಸಂಗನಗೌಡ

ವಯಸ್ಸು : 46 ವರ್ಷ.

ಉದ್ಯೋಗ : ಹೆಚ್.ಸಿ- ನಂ. 1253 ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ.

ವಾಸಸ್ಥಳ : ವಿಜಯಪುರ.

ಇಂದು ದಿನಾಂಕ **29-06-2024** ರಂದು ಸಾಕ್ಷಿಗೆ ಪ್ರಮಾಣವಚನ **ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2017 ರಿಂದ 2022 ರವರೆಗೆ ಮಹಿಳಾ ಪೊಲೀಸ್ ಠಾಣೆಯಲ್ಲಿ ಸಿ.ಹೆಚ್.ಸಿ ಅಂತಾ ಕೆಲಸ ಮಾಡಿರುತ್ತೇನೆ.

2) ಈ ಪ್ರಕರಣದಲ್ಲಿ ಮಾನ್ಯ ಡಿ.ವೈ.ಎಸ್.ಪಿ ರವರು ಮಹಿಳಾ ಪೊಲೀಸ್ ಠಾಣೆಯ ಚಾಸಾ-46 ಪಿ.ಐ ಇವರಿಗೆ ಬಬಲೇಶ್ವರ ಪೊಲೀಸ್ ಠಾಣೆಯ ಗುನ್ನಾ ನಂ. 154/2019 ರ ಪ್ರಕರಣದಲ್ಲಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ತೆರಳಿ ಅಲ್ಲಿ ಮೃತ ನಾಗವ್ವ ಇವರ ಶವ ಪಂಚನಾಮೆ ಜರುಗಿಸಿ, ಮರಣೋತ್ತರ ಪರೀಕ್ಷೆ ಮಾಡಿಸಿ ಶವವನ್ನು ವಾರಸುದಾರರಿಗೆ ಹಸ್ತಾಂತರಿಸುವಂತೆ ನಿರ್ದೇಶನ ನೀಡಿದ್ದ ಪ್ರಕಾರ ನಾನು ಚಾಸಾ-46 ರವರೊಂದಿಗೆ ಹುಬ್ಬಳ್ಳಿಗೆ ತೆರಳಿದ್ದೆ, ಆ ಕಾಲಕ್ಕೆ ಪೊಟೊಗಳನ್ನು ನಾನು ತೆಗೆದಿದ್ದೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವು ಈಗಾಗಲೇ ನಿಪಿ-2, 6, 4, 5 ಅಂತಾ ಗುರುತಿಸಲಾಗಿದೆ.

3) ಪೊಟೊಗಳನ್ನು ತೆಗೆದ ಬಾಬ್ತು ನಾನು ತನಿಖಾಧಿಕಾರಿಗಳಿಗೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಪ್ರಮಾಣ ಪತ್ರಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-45 ಎಂದು, ಸಾಕ್ಷಿ ಸಹಿಯನ್ನು ನಿಪಿ-45(ಎ) ಅಂತಾ ಗುರುತಿಸಲಾಯಿತು. ತೆಗೆದ

ಫೋಟೋಗಳನ್ನು ನಾನು ಸಿಡಿಗೆ ಅಳವಡಿಸಿ ನೀಡಿರುತ್ತೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-46 ಅಂತಾ ಗುರುತಿಸಲಾಯಿತು.

4) ಶವ ಪಂಚನಾಮೆ ಮತ್ತು ಶವ ಪರೀಕ್ಷ ಆದ ಮೇಲೆ ಮೃತ ನಾಗಮ್ಮ ಮತ್ತು ಆಕೆಯ ಮಗುವಿನ ಶವವನ್ನು ನಾನು ಚಾಸಾ-46 ಇವರ ಸೂಚನೆ ಮೇರೆಗೆ ವಾರಸುದಾರರಿಗೆ ಒಪ್ಪಿಸಿರುತ್ತೇನೆ. ಸಾಕ್ಷಿಯು ವಾರಸುದಾರರು ನೀಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-29 ಮತ್ತು 30 ಅಂತಾ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ-29(ಬಿ) ಮತ್ತು 30 (ಬಿ) ಅಂತಾ ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಶ್ರೀ.ಆರ್.ಎಸ್.ಎಲ್ ವಕೀಲರಿಂದ ಆರೋಪಿತರ ಪರವಾಗಿಃ</u>

1) ಫೊಟೊ ತೆಗೆಯುವುದರ ಬಗ್ಗೆ ಇಲಾಖೆಯಿಂದ ತರಬೇತಿ ನೀಡಿದ್ದಾರೆ, ನಾನು ಯಾವುದೇ ಕೊರ್ಸ್ ಮಾಡಿಲ್ಲ. ಫೊಟೊಗಳನ್ನು ನನ್ನ ಮೊಬೈಲ್ ಕ್ಯಾಮಾರದಲ್ಲಿ ತೆಗೆದಿರುತ್ತೇನೆ. ಇಲಾಖೆಯಿಂದ ನೀಡಿದ ಕ್ಯಾಮಾರದ ಬ್ಯಾಟರಿ ಖಾಲಿ ಆಗಿದ್ದರಿಂದ ನನ್ನ ಮೊಬೈಲನಲ್ಲಿ ಫೊಟೊ ತೆಗೆದಿರುತ್ತೇನೆ. ನಿಪಿ-45 ನ್ನು ನಾನು ಸ್ವತಃ ತಯಾರಿಸಿ ಕೊಟ್ಟಿರುತ್ತೇನೆ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುಡಿದ್ದೇನೆ, ಯಾವುದೇ ಫೊಟೊ ತೆಗೆದಿಲ್ಲ ಅನ್ನುವುದು ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
**29/06/2024**